**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.ನಂ. 5/2013**

**ಪಿ.ಡಬ್ಲ್ಯೂ.2 – ಶಿವಣ್ಣ**

**ಪ್ರಮಾಣ ವಚನ ಬೋಧಿಸಿದ ದಿನಾಂಕ: 13.02.2020**

**ಪಾಟಿ ಸವಾಲು: ಪ್ರತಿವಾದಿ ಪರ ವಕೀಲರಿಂದ : –**

ನಾನು ಈಗ ಸುಮಾರು 12 ವರ್ಷಗಳಿಂದ ಹೊಸಕೋಟೆಯಲ್ಲಿ ವಾಸವಾಗಿದ್ದೇನೆ. ವಾದಿ ನನ್ನ ಚಿಕ್ಕಪ್ಪನ ಮಗ. ದಾವಾ ಆಸ್ತಿಯ ಸರ್ವೆ ನಂ.87/4. ದಾವಾ ಆಸ್ತಿ ಸರ್ವೆ ನಂಬರ್ ಸ್ವತ್ತು ಎಂದರೆ ಸರಿ. ವಾದಿಯು ದಾವಾ ಆಸ್ತಿಯ ಪಶ್ಚಿಮದ ಕೊನೆಯ ಭಾಗಕ್ಕೆ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ಭಾಗಕ್ಕೆ ಪ್ರತಿವಾದಿ ಪಾಯ ಹಾಕಿರುತ್ತಾರೆ ಎಂದರೆ ಸಾಕ್ಷಿ ಪಾಯ ಹಾಕಲು ಹೋದಾಗ ಗಲಾಟೆ ಆಗಿರುತ್ತದೆ ಎನ್ನುತ್ತಾರೆ. ಪ್ರತಿವಾದಿ ಅವರ ಖಾನೆ ಷುಮಾರಿ ಸಂ.106ರಲ್ಲಿ ಪಾಯ ಹಾಕಲು ಹೋದಾಗ ವಾದಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಆ ಕುರಿತು ಪ್ರತಿವಾದಿ ವಾದಿಯ ಮೇಲೆ ದಾವೆ ನಂ.4/2013ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಪ್ರತಿವಾದಿ ಪರ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂಬರ್ ಸ್ವತ್ತಾಗಿದ್ದು, ಪ್ರತಿವಾದಿಗಳದ್ದು ಖಾನೆ ಷುಮಾರಿ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಾತನ ಹೆಸರಿನಲ್ಲಿರುತ್ತದೆ. ದಾವೆಗೆ ವಾದಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ದಾವಾ ಆಸ್ತಿಯಲ್ಲಿ ಅವರು ಸ್ವಾಧೀನದಲ್ಲಿರುವುದನ್ನು ತೋರಿಸಲು ಮತ್ತು ಚೆಕ್ಕುಬಂದಿಯನ್ನು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವಾಗ ದಾಖಲಿಸಿದ ದಿನಾಂಕ ಮತ್ತು ಗಲಾಟೆಯ ದಿನಾಂಕ ನನಗೆ ಗೊತ್ತಿಲ್ಲ, ಗಲಾಟೆಯಾದಾಗ ನಾನು ಊರಿನಲ್ಲಿ ಇರಲಿಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**